ಈ ದಿನ ದಿನಾಂಕಃ 15.09.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ</u>**

ವಾದಿ ಸರ್ವೆ ನಂ. 103 ಮತ್ತು 104 ರ ಸಂಬಂದಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಅಂಬೋಜಿರಾವ್ ರವರ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಹರೋನಹಳ್ಳಿ ಗಡಿ, ದಕ್ಷಿಣಕ್ಕೆ ಕುಬೇಂದ್ರೋಜಿರಾವ್ ರವರ ಜಮೀನು ಇರುತ್ತದೆ. ಸದರಿ ಚೆಕ್ಕುಬಂದಿ ಒಳಗಿನ ಆಸ್ತಿ ವಾದಿಗೆ ಸೇರಿದ್ದು ಎಂದು ತೋರಿಸಲು ಇರುವ ದಾಖಲೆಯನ್ನು ನಾನು ನೋಡಿಲ್ಲ. ಸರ್ವೆ ನಂ. 97, 98, 96, 106 ಹಾಗೂ 17 ರ ಆಸ್ತಿಗೆ ಸಂಬಂದಿಸಿದ ಯಾವುದೇ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸದರಿ ಆಸ್ತಿಗಳಲ್ಲಿ ಯಾರು ಸ್ವಾದೀನಾನುಭವದಲ್ಲಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ವಾದಿ ಹಾಗೂ ಅವರ ಮಕ್ಕಳು ಸ್ವಾದೀನದಲ್ಲಿದ್ದಾರೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸುಮಾರು 20 ವರ್ಷಗಳಿಂದ ವಾದಿ ಹಾಗೂ ಅವರ ಮಕ್ಕಳು ಸ್ವಾದೀನದಲ್ಲಿದ್ದಾರೆಂದು ನುಡಿಯುತ್ತಾರೆ. ಸುಮಾರು 20 ವರ್ಷಗಳಿಂದ 25-30 ಎಕರೆ ಜಮೀನಿನಲ್ಲಿ ವಾದಿಗಳು ಸ್ವಾದೀನದಲ್ಲಿದ್ದಾರೆ. ವಾದಿಯ ದಾವಾ ಆಸ್ತಿಯ ವಿಸ್ತೀರ್ಣ ಚೆಕ್ಕುಬಂದಿ ಹಾಗೂ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಚೆಕ್ಕುಬಂದಿ ಒಳಗೆ ವಾದಿಗಳು ಸ್ವಾದೀನ ಅನುಭವದಲ್ಲಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ವಾದಿಗಳು ಯಾರಿಗೂ ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

Sd/-

C/c 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.